ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೊಸದಾಗಿ ಮಂಜೂರಾತಿ ಆದಲ್ಲಿ, ನಿಯಮಾನುಸಾರ ಅನುದಾನ ಬಿಡುಗಡೆ ಕ್ರಮವಹಿಸಲಾಗುವುದು.

ಜಲ್ಲಿ ಮತ್ತು ಮರಳಿನ ಅಭಾವ

15(178); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿ ಜಲ್ಲಿ ಮತ್ತು ಮರಳು ಸಿಗದೆ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿ ಕ್ರಷರ್‌ಗಳು ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕ್ರಷರ್‌ಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಕ್ರಷರ್‌ಗಳನ್ನು ಪ್ರಾರಂಭಿಸಲು ಸರ್ಕಾರ ಕೆಲವು ಕಾನೂನು ತಿದ್ದುಪಡಿಗಳನ್ನು ಮಾಡಲು ಮುಂದಾಗಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಯಾವ ರೀತಿಯ ಕಾನೂನು ತಿದ್ದುಪಡಿಗಳನ್ನು ಮಾಡಲಾಗಿದೆ (ಪೂರ್ಣ ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) 2011ರ ಪೂರ್ವದಲ್ಲಿ ರಾಜ್ಯದಲ್ಲಿ 4000 ಜಿಲ್ಲಿ ಕ್ರಷರ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದವು. ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕ್ರಷರ್ ಘಟಕಗಳನ್ನು ಸುರಕ್ಷಿತ ವಲಯಗಳಿಗೆ ಸ್ಥಳಾಂತರಿಸುವ ಕಾರ್ಯವನ್ನು ಪ್ರಾರಂಭಿಸಿದ್ದರಿಂದ ಆಗಷ್ಟ್ 2013 ರಲ್ಲಿ ಎಲ್ಲಾ ಕ್ರಷರ್‌ಗಳ ಕಾರ್ಯವನ್ನು

ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ 740 ಕ್ರಷರ್‌ಗಳು ಕಾರ್ಯನಿರ್ವಹಿಸುತ್ತಿವೆ.

ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2011ಕ್ಕೆ ದಿನಾಂಕ: 26.12.2013ರಲ್ಲಿ ತಿದ್ದುಪಡಿ ತರಲಾಗಿದ್ದು, ಸುರಕ್ಷಿತ ವಲಯಗಳ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಪ್ರಸ್ತುತ, ಕ್ರಷರ್ ಘಟಕ ಸ್ಥಾಪಿಸಲು 2242 ಅರ್ಜಿಗಳು ಸ್ವೀಕೃತವಾಗಿದ್ದು, ನಿಯಮಾನುಸಾರ ಸ್ಥಾಪನೆಗೆ ಅರ್ಹರಿರುವ 923 ಅರ್ಜಿಗಳಿಗೆ ನಮೂನೆ ಬಿ1 ನೀಡಲಾಗಿದ್ದು, ಸದರಿ ಕ್ರಷರ್ ಮಾಲೀಕರು ಪರಿಸರ ಇಲಾಖೆಯಿಂದ ಅನುಮತಿ ಪಡೆಯಬೇಕಾಗಿದ್ದು, ಪ್ರಸ್ತುತ 740 ಕ್ರಷರ್‌ಗಳಿಗೆ ಕ್ರಷರ್ ಲೈಸನ್ಸ್(ಸಿ–ಫಾರ್ಮ್)ನ್ನು ಪಡೆದು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ ಸರ್ಕಾರಿ ಕಾಮಗಾರಿಗಳಿಗೆ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ 23.5 ದಶಲಕ್ಷ ಟನ್ ಮರಳಿನ ಬೇಡಿಕೆಯಿದ್ದು, ಪ್ರಸ್ತುತ, 7.5 ದಶಲಕ್ಷ ಟನ್ ನದಿ ಮರಳು ಮತ್ತು 2.92 ದಶಲಕ್ಷ ಟನ್ ಎಂ–ಸ್ಯಾಂಡ್ (ಕೃತಕ ಮರಳು) ರೂಪದಲ್ಲಿ ದೊರೆಯುತ್ತಿದೆ.

2.88 ದಶಲಕ್ಷ ಟನ್ ಕೃತಕ ಮರಳು ಉತ್ಪಾದನಾ ಘಟಕಗಳು ಸ್ಥಾಪನಾ ಹಂತದಲ್ಲಿವೆ.

ನೆರೆ ರಾಜ್ಯಗಳಿಂದ ಸಹ ಮರಳು ಸರಬರಾಜಾಗುತ್ತಿದ್ದು ಇದಲ್ಲದೇ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ದಾವಣಗೆರೆ, ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಎಂ–ಸ್ಯಾಂಡ್ ಉದ್ದೇಶಕ್ಕಾಗಿ ಕಲ್ಲು ಗಣಿ ಮಂಜೂರು ಮಾಡಲು 52 ಕಲ್ಲು ಗಣಿ ನಿಕ್ಷೇಪದ ಬ್ಲಾಕುಗಳನ್ನು ಗುರುತಿಸಿದ್ದು, ದಿನಾಂಕ:03.112.2014 ರಂದು ವಿಶೇಷ ರಾಜ್ಯ ಪತ್ರದಲ್ಲಿ ಸಾರ್ವಜನಿಕ ಮಾಹಿತಿಗಾಗಿ ಅಧಿಸೂಚನೆ ಜಾರಿ ಮಾಡಿದೆ. ಎಂ–ಸ್ಯಾಂಡ್ ಘಟಕ ಸ್ಥಾಪಿಸುವ ಸಾರ್ವಜನಿಕರಿಗೆ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲು ಅರ್ಜಿಗಳನ್ನು

ಆಹ್ವಾನಿಸಲಾಗುವುದು. ಈ ಘಟಕಗಳುಕೆಲವು ತಿಂಗಳೊಳಗೆ ಕಾರ್ಯಾರಂಭಗೊಳ್ಳಲಿದ್ದು ಇದರಿಂದ 4 ರಿಂದ 5 ದಶಲಕ್ಷ ಟನ್ ಎಂ–ಸ್ಯಾಂಡ್ ಉತ್ಪಾದನೆಯಾಗುವ ಸಾಧ್ಯತೆ ಇರುತ್ತದೆ.

ಎಂ–ಸ್ಯಾಂಡ್ ತಯಾರಿಸುವ ಉದ್ದೇಶಕ್ಕಾಗಿ ಇನ್ನು ಹೆಚ್ಚಿನ ಕಲ್ಲು ಗಣಿ ನಿಕ್ಷೇಪಗಳನ್ನು ಗುರುತಿಸುವ ಕಾರ್ಯವು ಪ್ರಗತಿಯಲ್ಲಿದೆ.

ಆ) 2013ರಲ್ಲಿ ಚಾಲ್ತಿಯಲ್ಲಿದ್ದ ಕ್ರಷರ್‌ಗಳ ಸಂಖ್ಯೆಗಿಂತ ಕಡಿಮೆ ಸಂಖ್ಯೆ ಕ್ರಷರ್‌ಗಳು ಕಾರ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ.

ಇ) ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2011ಕ್ಕೆ ದಿನಾಂಕ: 26.12.2013ರಂದು ಮತ್ತು ದಿನಾಂಕ: 06.02.14ರಂದು ನಿಯಮಗಳಿಗೆ ಮತ್ತು ಅಧಿನಿಯಮದ ಸೆಕ್ಷನ್ 6(ಎ)ನಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ಕ್ರಷರ್ ಲೈಸನ್ಸ್ ನೀಡುವಾಗ ಅಳವಡಿಸಲು ತಿಳಿಸಿದ್ದು, ಅದರನ್ವಯ ಸೆಕ್ಷನ್ 6(1) ತಿದ್ದುಪಡಿ ತಂದು ಈ ಸೆಕ್ಷನ್‌ನ್ನು ಸಡಿಲಿಕೆ ಮಾಡಲಾಗಿದೆ. ಕ್ರಷರ್ ಆಕ್ಟ್ ಮತ್ತು ನಿಯಮಗಳು ತಿದ್ದುಪಡಿಯಾದ ನಂತರ ಒಟ್ಟು 2242 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳಲ್ಲಿ 923 ಅರ್ಜಿಗಳಿಗೆ ನಮೂನೆ ಬಿ1 ನೀಡಲಾಗಿದ್ದು, ಸದರಿ ಕ್ರಷರ್ ಮಾಲೀಕರು ಪರಿಸರ ಇಲಾಖೆಯಿಂದ ಸಿ.ಎಫ್.ಓ. ಪಡೆದ ಕ್ರಷರ್ ಮಾಲೀಕರಿಗೆ ರಾಜ್ಯದ ಜಿಲ್ಲಾ ಕ್ರಷರ್ ಸಮಿತಿಯಿಂದ 740 ಕ್ರಷರ್‌ಗಳಿಗೆ ಕ್ರಷರ್ ಲೈಸನ್ಸ್ (ಸಿ–ಫಾರ್ಮ್)ನ್ನು ನಿಯಮಗಳು ತಿದ್ದುಪಡಿಯಾದ ನಂತರ ನೀಡಲಾಗಿದೆ

ಈ) ಹೌದು. ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2011ಕ್ಕೆ ದಿನಾಂಕ:26.12.2013ರಲ್ಲಿ ತಿದ್ದುಪಡಿ ತರಲಾಗಿದ್ದು, ಹಾಗೂ 06.02.14ರಂದು ನಿಯಮಗಳನ್ನು ರೂಪಿಸಲಾಗಿದೆ.

ಉ) ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2011ಕ್ಕೆ ದಿನಾಂಕ: 26.12.2013ರಲ್ಲಿ ತಿದ್ದುಪಡಿ ತರಲಾಗಿದ್ದು, ಹಾಗೂ

06.02.2014ರಂದು ನಿಯಮಗಳನ್ನು ರೂಪಿಸಲಾಗಿದೆ. ಜಲ್ಲಿ ಕ್ರಷರ್ ಘಟಕ ಪ್ರಾರಂಭಿಸಲು ಇರುವ ಮಾನದಂಡಗಳು ಈ ಕೆಳಕಂಡಂತಿದೆ.

1. ಹೊಸ ಜಲ್ಲಿ ಕ್ರಷರ್ ಸ್ಥಾಪನೆಗಾಗಿ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

2. ಅಧಿನಿಯಮದ ಸೆಕ್ಷನ್ 6ರಂತೆ ಕಲ್ಲುಪುಡಿ ಮಾಡುವ ಘಟಕಗಳಿಗಾಗಿ ಸುರಕ್ಷಿತ ವಲಯವೆಂದು ಘೋಷಿಸುವುದಕ್ಕೆ ಈ ಕೆಳಕಂಡ ಷರತ್ತುಗಳು ಅನ್ವಯವಾಗುತ್ತದೆ.

- ರಾಷ್ಟ್ರೀಯ ಹೆದ್ದಾರಿಗಳು ಅಥವಾ ರಾಜ್ಯ ಹೆದ್ದಾರಿಗಳ ಗಡಿಯಿಂದ 200 ಮೀಟರ್,
- ಪ್ರಧಾನ ಜಿಲ್ಲಾ ರಸ್ತೆಗಳ ಅಥವಾ ಇತರೆ ರಸ್ತೆಗಳ ಗಡಿಯಿಂದ 100 ಮೀಟರ್,
- ಕಂದಾಯ ಗ್ರಾಮಗಳು/ದೇವಾಲಯಗಳು/ಶಾಲೆಗಳಿಂದ 500 ಮೀಟರ್,
- ಮುನ್ಸಿಪಲ್ ಕಾರ್ಪೋರೇಷನ್, ಸಿಟಿ ಮುನ್ಸಿಪಲ್ ಕಾರ್ಪೋರೇಷನ್, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳ ಸರಹದ್ದುಗಳೊಳಗೆ ಇರತಕ್ಕದಲ್ಲ.
- ಪ್ರತಿ ಕಲ್ಲುಪುಡಿ ಘಟಕವ ಕನಿಷ್ಠ ಒಂದು ಎಕರೆ ಭೂಮಿಯಲ್ಲಿ ಇರತಕ್ಕದ್ದು.

3. ಲೈಸನ್ಸ್ ನೀಡುವ ಪ್ರಾಧಿಕಾರವು ಸುರಕ್ಷಿತ ವಲಯವೆಂದು ಘೋಷಿಸಲು ಮೇಲೆ ತಿಳಿಸಿರುವ ಷರತ್ತುಗಳಿಗೆ ಒಳಪಡುತ್ತದೆ ಎಂಬ ವರದಿಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ, ಅರಣ್ಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ

ಮಂಡಳಿಯಿಂದ, ಜಂಟಿ ಸ್ಥಳ ತನಿಖೆ ನಡೆಸಿ ಜಂಟಿ ಸ್ಥಳ ಪರಿಶೀಲನಾ ವರದಿಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ ಸಭೆಯಲ್ಲಿ ಜಂಟಿ ಸ್ಥಳ ಪರಿಶೀಲನಾ ವರದಿ ಮತ್ತು ಇತರೇ ಅಂಶಗಳನ್ನು ಪರಿಶೀಲಿಸಿ ಕ್ರಷರ್ ಆಕ್ಟ್ 2013 ಸೆಕ್ಷನ್ 6(1)ಕ್ಕೆ ಅನುಗುಣವಾಗಿದ್ದಲ್ಲಿ ಸುರಕ್ಷಿತ ವಲಯವೆಂದು ಅರ್ಜಿ ಸಲ್ಲಿಸಿದ 3 ತಿಂಗಳೊಳಗೆ ಕ್ರಷರ್ ಸಭೆಯಲ್ಲಿ ಸುರಕ್ಷಿತ ವಲಯವನ್ನು ಸುರಕ್ಷಿತ ವಲಯವೆಂದು ಮಾನ್ಯ ಜಿಲ್ಲಾಧಿಕಾರಿಗಳು ಅಧಿಸೂಚನೆ ಮೂಲಕ ಘೋಷಣೆ ಮಾಡಬೇಕಾಗಿರುತ್ತದೆ.

4. ಲೈಸೆನ್ಸಿಂಗ್ ಪ್ರಾಧಿಕಾರವು ಸುರಕ್ಷಿತ ವಲಯವೆಂದು ಘೋಷಿಸಿದ ನಂತರ ಪಾಲನೆ ಪ್ರಮಾಣ ಪತ್ರವನ್ನು (Certificate for compliance) ನೀಡಿದ ಮೇಲೆ ಅರ್ಜಿದಾರರು ಕರ್ನಾಟಕ ರಾಜಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಯಚರಣೆಯ ಅನುಮತಿ ಪ್ರಮಾಣ ಪತ್ರ (Certificate for operation) ಹಾಜರು ಪಡಿಸಿದ ಮೇಲೆ ಲೈಸೆನ್ಸಿಂಗ್ ಪ್ರಾಧೀಕಾರವು ಷರತ್ತು ಬದ್ದ ಲೈಸೆನ್ಸ್‌ನ್ನು ನೀಡಬೇಕಾಗಿರುತ್ತದೆ.

5. ತಿದ್ದುಪಡಿ ಅಧಿನಿಯಮ ದಿನಾಂಕ:26.12.2013 ರಂದು ಜಾರಿಗೆ ಬಂದಿದ್ದು, ಹಾಲಿ ಆಸ್ತಿತ್ವದಲ್ಲಿರುವ ಕಲ್ಲುಪುಡಿ ಘಟಕದವರು ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಸ್ವಯಂ ಘೋಷಣೆಯೊಂದಿಗೆ ಸೆಕ್ಷನ್ 6ರಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಡುತ್ತದೆಂದು ಅರ್ಜಿಸಲ್ಲಿಸಿದ ನಂತರ ಸದರಿ ಪ್ರಾಧಿಕಾರವು ಸುರಕ್ಷಿತ ವಲಯ ಪಾಲನೆ ಪ್ರಮಾಣ ಪತ್ರವನ್ನು ನೀಡುವವರೆಗೆ ಅಥವಾ

ಮೊದಲು ಅಲ್ಲಿಯವರೆಗೆ, ಕಾರ್ಯನಿರ್ವಹಿಸಲು ಅವಕಾಶ ನೀಡಲಾಗಿತ್ತು.

6. ಹಾಲಿ ಕಲ್ಲುಪುಡಿ ಮಾಡುವ ಆಸ್ತಿತ್ವದಲ್ಲಿರುವ ಘಟಕವನ್ನು ಹೊಂದಿರುವ ವ್ಯಕ್ತಿಯು ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಿಂದ ಬೇರೆಯದಾಗ ಲೈಸೆನ್ಸಿಂಗ್ ಪ್ರಾಧಿಕಾರವು ಸುರಕ್ಷಿತ ವಲಯವೆಂದು ಪ್ರಮಾಣೀಕರಿಸಿರುವ ಇತರ ಯಾವುದೇ ಸ್ಥಳವನ್ನು ಪಡೆದರೆ, ಅಂತಹ ಕಲ್ಲುಪುಡಿ ಮಾಡುವ ಘಟಕವನ್ನು, ಸುರಕ್ಷಿತ ಅನುಪಾಲನ ಪ್ರಮಾಣ ಪತ್ರವನ್ನು ನೀಡಿದ ದಿನಾಂಕದಿಂದ ಒಂದು ವರ್ಷದೊಳಗೆ ಪ್ರಮಾಣೀ ಕರಿಸಲಾದ ಸುರಕ್ಷತಾ ವಲಯಕ್ಕೆ ಸ್ಥಳಾಂತರಿಸ ಬೇಕಾಗಿರುತ್ತದೆ.

7. ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ:SAL(civil): 8519/2006ಡಿ ಆದೇಶದಂತೆ ರಾಜ್ಯ ಸರ್ಕಾರವು ಪತ್ರ ಸಂಖ್ಯೆ: ಸಿಐ 350 ಎಂಎಂಎನ್ 2014 ದಿನಾಂಕ: 27.09.2009ರ ನಂತರ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಕಟ್ಟಡಗಳು ಸ್ಥಾಪನೆಗೊಂಡಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದಂತಾಗುವುದರಿಂದ ಕ್ರಷರ್ ಕಾಯ್ದೆ ಮತ್ತು ನಿಯಮಗಳು ಉದ್ದೇಶಕ್ಕೆ ಪರಿಗಣಿಸಬಾರದಾಗಿ ತಿಳಿಸಿದ್ದು ಅದೇ ರೀತಿ ಆದೇಶದ ಪೂರ್ವದಲ್ಲಿ ನಿರ್ಮಾಣಗೊಂಡಿರುವ ಅನಧಿಕೃತ ಧಾರ್ಮಿಕ ರಚನೆಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಪ್ರಕರಣವಾರು ಪರಿಶೀಲಿಸಿ ಕ್ರಮ ಕೈಗೊಳ್ಳಲು ಅವಕಾಶವಿರುವುದರಿಂದ ಅದರಂತೆ ಅಗತ್ಯ ಕ್ರಮ ಕೈಗೊಂಡು ಅಂತಹ ಅನಧಿಕೃತ ರಚನೆಗಳನ್ನು ಕ್ರಷರ್ ಕಾಯ್ದೆ ಮತ್ತು ನಿಯಮಗಳ ಉದ್ದೇಶಕ್ಕೆ ಪರಿಗಣಿಸಬಾರದಾಗಿ ಆದೇಶ ಹೊರಡಿಸಿದೆ.